International Journal of Kannada Research
www.kannadajournal.com

ISSN: 2454–5813
IJKR 2020; 6(4): 44-48
© 2020 IJKR
www.kannadajournal.com
Received: 23-08-2020
Accepted: 29-09-2020

**ಡಾ. ಪದ್ಮಾಕರ. ಅಶೋಕಕುಮಾರ ಮಟ್ಟಿ**
ಕನ್ನಡದ ಸಹ ಪ್ರಾಧ್ಯಾಪಕ, ಸರ್ಕಾರಿ ಪದವಿ ಕಾಲೇಜು, ಯಾದಗಿರಿ, ಕರ್ನಾಟಕ, ಭಾರತ

**Corresponding Author:**
**ಡಾ. ಪದ್ಮಾಕರ. ಅಶೋಕಕುಮಾರ ಮಟ್ಟಿ**
ಕನ್ನಡದ ಸಹ ಪ್ರಾಧ್ಯಾಪಕ, ಸರ್ಕಾರಿ ಪದವಿ ಕಾಲೇಜು, ಯಾದಗಿರಿ, ಕರ್ನಾಟಕ, ಭಾರತ

# ಶರಣರ ಸಾಮಾಜಿಕ ಜಾಗೃತಿ

**ಡಾ. ಪದ್ಮಾಕರ. ಅಶೋಕಕುಮಾರ ಮಟ್ಟಿ**

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನ ಶರಣ ಸಮುದಾಯ ಮಾಡಿದ ಕ್ರಾಂತಿ ಮಾನವ ಬದುಕಿನ ಉದ್ಧಾರದ ಮಹಾ ಪ್ರಯೋಗವಾಗಿದೆ. ದೇವರ ಮೂಲವಾದ ಭಾರತೀಯ ಧರ್ಮ ದೃಷ್ಟಿಯನ್ನು ಮಾನವನತ್ತ ಹೊರಳಿಸಿ, ಅದಕ್ಕೆ ಒತ್ತು ಕೊಟ್ಟದ್ದು ಬಸವಾದಿ ಪ್ರಮಥರು ಕೈಗೊಂಡ ಒಂದು ವಿಶೇಷ ಪ್ರಯತ್ನ ಎಂದೇ ಹೇಳಬೇಕು. ದೇವರನ್ನು ಕಾಣಲು ದೇವರನ್ನೆ ಹುಡುಕಿಕೊಂಡು ಹೋಗುವ ದೃಷ್ಟಿಯನ್ನು ಬದಲಾಯಿಸಿ, ಮಾನವರನ್ನು ಪರಿವರ್ತನೆ ಮಾಡಬೇಕು ಎಂಬುದು ಅವರ ಕ್ರಾಂತಿಯ ಮೂಲ ಮಂತ್ರವಾಗಿತ್ತು. ಸ್ವರ್ಗ ಸಾಧನೆ, ಕೈವಲ್ಯ ಪ್ರಾಪ್ತಿ, ಸನ್ಯಾಸ ಸ್ವೀಕಾರ, ಸಂಸಾರ ತ್ಯಾಜ್ಯ ಮುಂತಾದ ಮೂಢ ವಿಚಾರಗಳನ್ನು ತೆಗೆದುಹಾಕಿ ಜೀವನ ರೀತಿಯನ್ನು ಬದಲಾಯಿಸಿ ಮಾನವ ವಿಕಾಸ, ಸಾಮಾಜಿಕ ಸಾಮರಸ್ಯ ಸಂಸಾರ ಮಾನ್ಯತೆ ಲೌಕಿಕವನ್ನು ತ್ಯಜಿಸುವ ಆಧ್ಯಾತ್ಮಿಕವಾದ ದೃಷ್ಟಿಕೋನವನ್ನು ಶರಣರು ಹುಟ್ಟು ಹಾಕಿದರು. ಇದು ಭಾರತೀಯ ಜೀವನದ ಹೊಸದೃಷ್ಟಿಗೆ ಶಿವಶರಣರು ನೀಡಿದ ಮಹತ್ವದ ಕೊಡುಗೆಯಾಗಿದೆ. ವ್ಯಕ್ತಿ, ಸಂಸಾರ, ಸಮಾಜಗಳಿಗಿರುವ ಅವಿನಾಭಾವ ಸಂಬಂಧ ಮಾನವೀಯ ಬದುಕಿನ ಪರಿಕಲ್ಪನೆ, ಜೀವನದ ಆದರ್ಶ ಶಿವಶರಣರು ಪರಿಷ್ಕರಿಸಿದ ವೀರಶೈವ ಧರ್ಮದ ವೈಶಿಷ್ಟ್ಯ ಶಿವಶರಣರ ಜೀವನ ದರ್ಶನ ಸಾಮಾಜಿಕವಾದುದು. ಹಲವು ಜನ ಶಿವಶರಣರ ವಿಚಾರಗಳು ಚರ್ಚಿತಗೊಂಡು ಅವು ಸಾಣೇಕಲ್ಲಿಗೆ ಘರ್ಷಿತವಾಗಿ ಹೊರಹೊಮ್ಮಿದ ಅಪ್ಪಟ ಸುವರ್ಣ ನಾಣ್ಯಗಳಾಗಿವೆ. ಹಲವಾರು ಶಿವಶರಣರು ತಮ್ಮ ಸ್ವಾನುಭವ ದರ್ಶನವನ್ನು ಸಮೀಕರಿಸಿದ ವೇದಾಂತದ ಸೂಳ್ನುಡಿಗಳೇ ಅಮೂಲ್ಯವಾದ ವಚನಗಳಾಗಿ ರೂಪು ತಳೆದವು.

ಶರಣ ಧರ್ಮದ ತಳಹದಿ ಸರ್ವಸಮಾನತೆ. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನ್ನೆಲ್ಲರನೊಂದೆ ಎಂಬೆ! ಎಂಬುದು ಶರಣರ ತಾತ್ವಿಕ ನಿಲುವು, ವಿಶ್ವಾತ್ಮನ ದಿವ್ಯ ಜ್ಯೋತಿಯ ಕಿರಣಗಳಾದ ಮಾನವರು ಎಲ್ಲರೂ ಸಮಾನರು. ಮೇಲು–ಕೀಳು, ಹೆಣ್ಣು–ಗಂಡು, ಹಿರಿದು–ಕಿರಿದು ಎಂಬುದೆಲ್ಲಾ ಕೃತಕ, ಸ್ವಾರ್ಥ ಪ್ರೇರಕವಾದದ್ದು. ಇದು ಸಮಾಜದ ಪ್ರಗತಿಗೆ ಘಾತುಕವಾದದ್ದು. ಹಿರಿದು–ಕಿರಿದು, ಮೇಲು–ಕೀಳುಗಳನ್ನು ಕಲ್ಪಿಸಿದ ಮಾನವನ ಹೇಯ ದುರ್ಬುದ್ಧಿ ಅತ್ಯಂತ ಕೀಳುತನದಿಂದ ಕೂಡಿದ್ದು ಎಂದು ಶರಣರು ಅದನ್ನು ಬಲವಾಗಿ ಖಂಡಿಸಿದರು. ದೇವರು ಒಬ್ಬನೇ!! ಭಕ್ತಿಯೊಂದೇ ದೇವರನ್ನು ಕಾಣುವದಕ್ಕೆ ದಾರಿ. ಸೇವೆಯೊಂದೆ ಅದರ ಮಂತ್ರ ಎಂಬುದನ್ನು ಬೋಧಿಸಿದರು. ಅದು ಅವರ ಸಾಮಾಜಿಕ ಜೀವನ ಮೌಲ್ಯಕ್ಕೆ ಹಿನ್ನೆಲೆಯಾಗಿ ನಿಂತುಕೊಂಡಿತು. ಪ್ರಭು–ಪೂಜಾರಿಗಳ ಹಿಡಿತದಿಂದ ದೇವರನ್ನು ಪಾರುಮಾಡಿ ಜನತೆಯ ಮೌಢ್ಯವನ್ನು ಹೊಡೆದೋಡಿಸಿದರು. ಏಕದೇವೋಪಾಸನೆಯನ್ನು ಪ್ರತಿಷ್ಠಾಪನೆ ಮಾಡಿದರು. ಅವರು ಕಂಡ ಸಾಮಾಜಿಕ ದೃಷ್ಟಿಗೆ ಏಕದೇವೋಪಾಸನೆ ತುಂಬಾ ಪ್ರಯೋಜನಕಾರಿಯಾಯಿತು. ಅದು ಸತ್, ಚಿತ್ ಹಾಗೂ ಆನಂದ ಸ್ವರೂಪವಾದ ಸ್ವಯಂಭುಶಕ್ತಿಯ ಉಪಾಸನೆಯತ್ತ ಜನಮನವನ್ನು ತಿರುಗಿಸಿದುದು ಇನ್ನೊಂದು ಮಹತ್ವದ ಹೆಜ್ಜೆಯೆಂಬುದು ಗಮನಿಸತಕ್ಕ ಸಂಗತಿ. ಈ ಎಲ್ಲಾ ಮೌಲ್ಯಗಳನ್ನು ಅಭಿವ್ಯಕ್ತಗೊಳಿಸಲು ಒಂದು ಸಾಹಿತ್ಯ ರೂಪ ರಚನೆಗೊಂಡಿತು. ಅದೇ ಅಪೂರ್ವವೂ ಅನುಪಮವೂ ಹಾಗೂ ಅದ್ಭುತವು ಆದ ವಚನ ಸಾಹಿತ್ಯ.

ಸಾಹಿತ್ಯ ಕೃತಿಗಳನ್ನು ರಚಿಸಲು ನೇರ ಉದ್ದೇಶವನ್ನಿಟ್ಟುಕೊಂಡು ಬಸವಣ್ಣನವರಾಗಲಿ, ಹನ್ನೆರಡನೆಯ ಶತಮಾನದ ಸಕಲ ಶಿವಶರಣರಾಗಲಿ ವಚನಗಳನ್ನು ರಚಿಸಿದವರಲ್ಲ. ಅವರು ಕೈಗೊಂಡ ಆಧ್ಯಾತ್ಮಿಕ ಧಾರ್ಮಿಕ ಹಾಗೂ ಸಾಮಾಜಿಕ ಆಂದೋಲನದ ಸಂದರ್ಭದಲ್ಲಿ ಅವು ಸಹಜವಾದ ಸಹಸೃಷ್ಟಿಯಾಗಿ ಹೊರಹೊಮ್ಮಿದವು. ಅಂತರಂಗ ಮತ್ತು ಬಹಿರಂಗ ಪ್ರಪಂಚದಲ್ಲಿ ಅವರು ನಡೆಸಿದ ಚಿಂತನೆ, ಸಾಧನೆ ಹಾಗೂ ವೈಚಾರಿಕ ಕ್ರಾಂತಿಯ ಮೂಲಕ ಪಡೆದ ಅನುಭವದ ತುಡಿತಗಳು ವಚನಗಳ ರಚನೆಗೆ ಮೂಲ

ಪ್ರೇರಣೆಯಾಯಿತು. ತಮ್ಮ ಅನುಭವಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವುದು ಅವರ ಹಂಬಲವಾಗಿತ್ತು. ಆದುದರಿಂದ ವಚನಕಾರರು ಜನಸಾಮಾನ್ಯರು ಅರ್ಥಮಾಡಿಕೊಳ್ಳಬಲ್ಲ ಮತ್ತು ಅವರು ನಿತ್ಯವೂ ವ್ಯವಹರಿಸುವ ಸರಳ ಮತ್ತು ನೇರವಾದ ಭಾಷೆಯಲ್ಲಿಯೇ ವಚನಗಳನ್ನು ರಚಿಸಿದರು.

ವಚನವೆಂಬ ಈ ಸಾಹಿತ್ಯ ರೂಪದ ಉದ್ಭವವೇ ನೈಸರ್ಗಿಕವಾದುದು, ಸಹಜವಾದುದು. ಬಸವಣ್ಣನವರಿಗಿಂತ ಪೂರ್ವದಲ್ಲಿಯೇ ಆಗಿಹೋದ ಶರಣರು ತಮ್ಮ ಅನುಭವದ ಆಕಾರ ಲಕ್ಷಣಕ್ಕನುಗುಣವಾಗಿ ತಮ್ಮ ಅಭಿವ್ಯಕ್ತಿಯ ಅಗತ್ಯಕ್ಕನುಗುಣವಾಗಿ ಇಂತಹ ಒಂದು ಸಾಹಿತ್ಯ ರೂಪವನ್ನು ಸೃಷ್ಟಿಸಿಕೊಂಡರು. ಸ್ವಂತ ಸಾಧಕ ಜೀವನದ ಭಾವ ತೀವ್ರತೆಯನ್ನು ಸಮಾಜ ಬೋಧನೆಯ ವೈಚಾರಿಕತೆಯನ್ನು ಹೊತ್ತು ಉತ್ತರಿಸಬಲ್ಲ ಸಮರ್ಥ ರೂಪವೊಂದರ ಅಗತ್ಯತೆ ಅವರಿಗಿದ್ದಿತು. ಮೇಲಾಗಿ ಆಯಾ ಸಂದರ್ಭಕ್ಕನುಗುಣವಾಗಿ ಮೂಡಿಬಂದ ಬಿಡಿಬಿಡಿಯಾದ ಅನುಭವ ವಿಚಾರಗಳನ್ನು ಚುಟುಕು ಗಾತ್ರದಲ್ಲಿ ಅಭಿವ್ಯಕ್ತಪಡಿಸುವ ಅಗತ್ಯ ಇದ್ದಿತು. ಆ ಕಾರಣದಿಂದಾಗಿ ಪದ್ಯದ ಭಾವಯುಕ್ತತೆ, ಸಮತೂಕವಾದ ಮಾಧುರ್ಯ ಮತ್ತು ಲಯಗಳನ್ನು ಗದ್ಯದ ಸ್ಪಷ್ಟತೆಯನ್ನು ಹೇಳಬೇಕಾಗಿತ್ತು. ಹಾಗಾಗಿ ಸ್ವತಂತ್ರ ಆಡುನುಡಿಯ ಬೆಡಗು ಶಕ್ತಿಯನ್ನು ಸುಂದರವಾಗಿ ಮೇಳವಿಸಿಕೊಂಡ ವಚನಸಾಹಿತ್ಯ ರೂಪ ಉದಯಿಸಿಬಂತು. ಹನ್ನೆರಡನೆಯ ಶತಮಾನದ ಶರಣರಿಗಿಂತ ಪೂರ್ವದಲ್ಲಿಯೇ ಜೇಡರ ದಾಸಿಮಯ್ಯಾದಿ ಶರಣರಲ್ಲಿ ಇದು ಸಿದ್ಧರೂಪ ಪಡೆಯಿತು. ಬಸವಾದಿ ಶರಣರಲ್ಲಿ ಇದು ಉತ್ತುಂಗ ಶಿಖರಕ್ಕೇರಿತು. ಉನ್ನತ ವ್ಯಕ್ತಿತ್ವ ಸಂಪನ್ನರು ಮತ್ತು ಉನ್ನತ ಅನುಭವಿಗಳ ಆಂತರಿಕ ತುಡಿತದ ಉಕ್ತಿಗಳಾದ್ದರಿಂದ ವಚನಗಳು ಸಹಜವಾಗಿಯೇ ಶಕ್ತಿಯುತವಾದವು. ಸುಂದರವೆನಿಸಿದವು ಅಂತೆಯೆ ವಚನಗಳಲ್ಲಿ ಮಿಡಿದದ್ದು ವಚನಕಾರರ ಸಮಗ್ರವಾದ ಪರಿಶುದ್ಧ ವ್ಯಕ್ತಿತ್ವ.

ಒಂದು ಸಮಾಜದ ಅಮೂಲಾಗ್ರ ಬದಲಾವಣೆಯೆಂದರೆ ಪ್ರಮುಖವಾಗಿ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆ. ಇಂಥ ಬದಲಾವಣೆಗೆ ಸಮಾಜದ ಹಾಗೂ ಜನಸಮುದಾಯದ ಮನಸ್ಸನ್ನು ಸಿದ್ಧಗೊಳಿಸುವುದು ಪ್ರಮುಖವಾಗಿತ್ತು. ಇಂತಹ ಮನಸ್ಸನ್ನು ಕಟ್ಟುವ ಕೆಲಸವನ್ನು ವಚನ ಸಾಹಿತ್ಯದಲ್ಲಿ, ಹನ್ನೆರಡನೆಯ ಶತಮಾನದ ವಚನಕಾರರ ಬದುಕಿನಲ್ಲಿ ಕಾಣಬಹುದಾಗಿದೆ.

ಸ್ಥಗಿತಗೊಂಡ ಸಮಾಜ ವ್ಯವಸ್ಥೆಯನ್ನು ಚಲನಶೀಲಗೊಳಿಸುವ, ನಿಷ್ಕ್ರಿಯಗೊಂಡ ಬದುಕಿನಲ್ಲಿ ಉಲ್ಲಾಸದ ಸೆಲೆಯೊಡೆಸುವ ಕಾರ್ಯವನ್ನು ವಚನಕಾರರು ಕೈಗೊಂಡರು. ಜಿಡ್ಡುಗಟ್ಟಿದ ಸಮಾಜ ವ್ಯವಸ್ಥೆಯ ಅಮೂಲಾಗ್ರ ಬದಲಾವಣೆಗೆ ಕಾರಣವಾಗುವ ವಿಚಾರಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದರು. ಮಾನವೀಯ ಕಳಕಳಿಯೊಂದಿಗೆ ಶೋಷಿತರ ಪರವಾಗಿ ಕೈಗೊಂಡ ಈ ಚಳುವಳಿಯನ್ನು ವಚನಕಾರರು ಹುಟ್ಟು ಹಾಕಿದರು. ವಚನಕಾರರು ವಚನ ಸೃಷ್ಟಿಯ ಜೊತೆಗೆ ಒಳ್ಳೆಯ ವಿಮರ್ಶಕರೂ ಆಗಿದ್ದರು. ಆದ್ದರಿಂದಲೇ ಅವರ ವಚನಗಳಲ್ಲಿ ಆತ್ಮಶೋಧನೆ ಎದ್ದು ಕಾಣುತ್ತದೆ. ಬಸವಾದಿ ಪ್ರಮಥರು ಹುಟ್ಟು ಹಾಕಿದ ಕ್ರಾಂತಿಯ ದೃಷ್ಟಿಕೋನ ಸ್ತ್ರೀಯರಿಗೆ ನೀಡಿದ ಸ್ವಾತಂತ್ರ್ಯದಲ್ಲಿದೆ. ಏಕೆಂದರೆ ಸಾಮಾಜಿಕ ಸಂಬಂಧಗಳಲ್ಲಿ ಮನುಷ್ಯನಿಗೆ ಅತೀ ಸಮೀಪದ ಸಂಬಂಧವೇ ಸ್ತ್ರೀ ಸಂಬಂಧ. ಆದ್ದರಿಂದಲೇ ಇದನ್ನು ಮುಖ್ಯವಾದ ಮೌಲ್ಯವಾಗಿ ಪರಿಗಣಿಸಿದರು. ಶಿವಶರಣರು ಸ್ತ್ರೀ ಶೂದ್ರಳಲ್ಲ, ಸೂತಕಿ, ಪಾತಕಿಯಲ್ಲ, ಆಕೆಯೊಬ್ಬ ಮಡದಿ, ತಾಯಿ ಸಂಸಾರದ ಕೇಂದ್ರಬಿಂದು, ಹೆಣ್ಣು ಮಾಯೆಯಲ್ಲ ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬ ಸಿದ್ಧರಾಮೇಶ್ವರರ ನುಡಿ ಶರಣ ಧರ್ಮದ ಕಹಳೆಯಾಯಿತು. ಹೆಣ್ಣು ಮಾಯೆಯಲ್ಲ ತಾಯಿ, ಶೂದ್ರಳಲ್ಲ ಶ್ರೀದೇವಿ, ಸತಿಪತಿಗಳಿಬ್ಬರಿಗೂ ಲಿಂಗದೇವರೇ ಪತಿ. ಅದರ ಉಪಾಸನೆಯೇ ಸಂಸಾರ ಜೀವನದ ಮರ್ಮ. ಇಂದ್ರಿಯಾನುಭವದ ಗುಟ್ಟು. ಅದೇ ದಾಸೋಹಪಥ ಕಾಯಕ ದಾರಿ ಎಂದು ಅವರು ನಿರ್ಣಯಿಸಿದರು. ಈ ಸಂಸಾರ ಮಾನ್ಯತೆಯ ಶರಣ ದಾರಿ, ಸನ್ಯಾಸತ್ವವನ್ನು ತಳ್ಳಿ ಹಾಕಿತು. ಮಾನವೀಯ ಬದುಕಿಗೆ ಸಾಮಾಜಿಕ ಸಂಬಂಧಗಳಿಗೆ ಅರ್ಥಪೂರ್ಣತೆಯನ್ನು ಒದಗಿಸಿಕೊಟ್ಟಿತು.

ಒಂದು ಮನೆತನದ ಇಡೀ ಭಾರವನ್ನೆ ಹೊರುವ ಆಕೆಯನ್ನು ಹೇಗೆ ಕೀಳೆನ್ನಲಾದೀತು? ಇದೆಲ್ಲದರ ಸಂಪೂರ್ಣ ಅನುಭವ ಅರಿವು ಇದ್ದ ಶಿವಶರಣರು ಸ್ತ್ರೀಗೆ ಹೊಸ ಅನುಭವದ ಅರಿವುಂಟಾಗುವಂತೆ ಮಾಡಿದರು. ಆಕೆಯ ವೈಚಾರಿಕ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸಿ ಕೊಟ್ಟರು. ಹಾಗಾಗಿ ಅನೇಕ ಶಿವಶರಣೆಯರು ತಮಗೆ ದೊರೆತ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸದುಪಯೋಗ ಪಡಿಸಿಕೊಂಡು ವಚನ ರಚನೆಗೆ ತೊಡಗಿದರು. ಹಾಗಾಗಿ ಶಿವಶರಣೆಯರ ಅನೇಕ ಅಭಿವ್ಯಕ್ತಿಗಳು (ವಚನಗಳು) ದಾಖಲೆಗೊಂಡು ಇಂದಿನ ಜನಾಂಗಕ್ಕೆ ಅಭ್ಯಾಸ ಯೋಗ್ಯವಾಗಿವೆ.

ಈ ವಚನ ಸಾಹಿತ್ಯ ಸಂದರ್ಭದಲ್ಲಿ ಧಾರ್ಮಿಕವಾಗಿ, ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಸ್ತ್ರೀ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ್ದಳು. ವೈದಿಕರ ಕಪಿಮುಷ್ಠಿಯಲ್ಲಿ ನಲುಗಿ ಹೋಗಿದ್ದ ಆಕೆಯ ಜೀವವಾದಕ್ಕೆ ವಚನಕಾರರ ಮುಕ್ತ ಪರಿಸರದಲ್ಲಿ ಮನದುಂಬಿ ಅರಳಿದಳು. ಹೆಣ್ಣು ಕೂಡ ಪುರುಷರಂತೆ ಮಾತಾಡಬಲ್ಲಳು, ಬರೆಯ ಬಲ್ಲಳು, ಯೋಚಿಸಬಲ್ಲಳು ಎಂಬುವುದನ್ನು ಮೊಟ್ಟಮೊದಲ ಬಾರಿಗೆ ವಚನಕಾರ್ತಿಯರು ಜಗತ್ತಿಗೆ ತೋರಿಸಿಕೊಟ್ಟರು. ಅಂದಿನ ವೈಶಿಷ್ಟ್ಯತೆಯೆಂದರೆ ಕೆಳವರ್ಗದ ಮಹಿಳೆಯರು ಕೂಡ ದನಿ ಎತ್ತಿ ಧೈರ್ಯದಿಂದ ಮಾತನಾಡಿದ್ದು. ಇತಿಹಾಸದ ಘಟ್ಟದಲ್ಲಿ ಹೆಣ್ಣು ಮಾತಾಡಿದ್ದೆ ಅಪರೂಪ. ಅಂಥದರಲ್ಲಿ ಹನ್ನೆರಡನೆಯ ಶತಮಾನದ ಶಿವಶರಣರು ತೋರಿದ ವಿಶಾಲ ಮನೋಭಾವ, ನಡೆಸಿದ ' ಕ್ರಾಂತಿಯ ಫಲವಾಗಿ ಮೂಲೆಗುಂಪಾಗಿದ್ದ ಶೂದ್ರಾತಿಶೂದ್ರ ಮಹಿಳೆಯರು ವಚನ ಚಳುವಳಿಯಲ್ಲಿ ಭಾಗಿಗಳಾಗಿದ್ದರು. ದಲಿತರೂ ದನಿ ಎತ್ತಿದರು. ನೂರಾರು ಜನ ದಲಿತ ವರ್ಗದಿಂದ ಬಂದಂತಹ ಶರಣರ ಧ್ವನಿ ಒಂದೇ ಘಟ್ಟದಲ್ಲಿ ಕೇಳಿ ಬಂದದ್ದು ವಿಸ್ಮಯಕಾರಕ ಹಾಗೂ ಅಷ್ಟೆ ಅದ್ಭುತವಾದದ್ದು. ಮತು ವಿಚಾರಪರವಾದದ್ದು.

ಅಂತೆಯೇ ಈ ವಚನಸಾಹಿತ್ಯಕ್ಕೆ ಅನೇಕ ದಲಿತ ವರ್ಗದ ಶಿವಶರಣೆಯರು ತಮ್ಮ ಅಪಾರ ಕೊಡುಗೆಯನ್ನು ನೀಡಿದ್ದನ್ನು ನಾವು ಕಾಣುತ್ತೇವೆ. ಈ ಶರಣೆಯರೆಲ್ಲರೂ ಕಲ್ಯಾಣ ಕ್ರಾಂತಿಯ ಹರಿಕಾರ ಬಸವಣ್ಣನವರ ತತ್ವಗಳಾದ ಸಮಾನತೆ, ಸ್ವಾತಂತ್ರ್ಯ ದಾಸೋಹ ತತ್ವ, ಕಾಯಕ ಸಿದ್ಧಾಂತ ಇವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮಹಾನ್ ಸಾಧಕರಾಗಿ ವಚನಗಳನ್ನು ರಚಿಸಿರುವರು. ಉನ್ನತ ಆಧ್ಯಾತ್ಮ ಜೀವಿಗಳಾಗಿ ಬಾಳಿದರು. ಈ ಪರಂಪರೆಯಲ್ಲಿ ಯಾರನ್ನು ಹೆಸರಿಸಬೇಕು? ಯಾರ ಕೊಡುಗೆಯನ್ನು ಕೊಂಡಾಡಬೇಕೆಂಬುದು ಸಂಕ್ಷಿಪ್ತವಾಗಿ ಹೇಳಲು ಸಾಧ್ಯವಿಲ. ಅದು ಸುದೀರ್ಘಕಾಲದ ಪರಂಪರೆಯನ್ನು ಹೊಂದಿದ್ದಾಗಿದೆ. ಆ ಮಹಾನ್ ಶಿವಶರಣೆಯರ ಕೊಡುಗೆಯನ್ನು ಸಾಧ್ಯವಾದಷ್ಟು ಪರಿಚಯಿಸುವ, ಸ್ಮರಿಸುವ ಕಿರು ಪ್ರಯತ್ನ ಇಲ್ಲಿದೆ.

ಇಲ್ಲಿ ಪ್ರಮುಖವಾಗಿ ಕೇಳಿ ಬರುವ ಹೆಸರುಗಳೆಂದರೆ ಹಡಪದ ಅಪ್ಪಣ್ಣನ ಸತಿಯಾದ ಲಿಂಗಮ್ಮ, ಶಿವಶರಣೆಯರಾದ ದೇವಮ್ಮ, ಕಾಳವ್ವೆ, ಸತ್ಯಕ್ಕ, ಆಯ್ದಕ್ಕಿ ಲಕ್ಕಮ್ಮ, ರಾಯಮ್ಮ ಕದಿರೆ ರೆಮ್ಮವ್ವೆ, ಉರಿಲಿಂಗ ಪೆದ್ದಿಗಳ ಸತಿ ಕಾಳವ್ವೆ, ಕಾಲಕಣ್ಣಿಯ ಕಾಮಮ್ಮ, ಕೇತಲದೇವಿ, ಗೊಗ್ಗವ್ವೆ ಮೊದಲಾದ ಶಿವಶರಣೆಯರು ಅಲ್ಲದೇ ಈ ಪಟ್ಟಿಗೆ ಹೊರತಾದ ಶಿವಶರಣೆಯರು ಅನೇಕರಿದ್ದಾರೆ. ಈ ಎಲ್ಲಾ ಶಿವಶರಣೆಯರು ತಮ್ಮ ವಚನಗಳ ಮೂಲಕ ಜನಸಮಾನ್ಯರಲ್ಲಿ

ವೈಚಾರಿಕ ಆಧ್ಯಾತ್ಮಿಕ ಬೀಜ ಬಿತ್ತಿದ್ದಾರೆ. ಮಾತ್ರವಲ್ಲ ತಾವು ನುಡಿದಿದ್ದನ್ನು ನಡೆದು ತೋರಿಸಿದ್ದಾರೆ. ಈ ವಚನಕಾರ್ತಿಯರಲ್ಲಿ ಕೆಲವರು ಸಮಾಜದ ಓರೆ-ಕೋರೆಗಳನ್ನು ತಿದ್ದುವ ಸ್ಥೈರ್ಯವನ್ನು ತೋರಿಸುವುದು ನಿಜಕ್ಕೂ ಹೆಮ್ಮೆಯ ವಿಷಯವಾಗಿದೆ.

ವಚನಕಾರ್ತಿಯರಲ್ಲಿ ಅನೇಕರಿಗೆ ವೀರಶೈವಾಚರಗಳನ್ನು ಎತ್ತಿ ಹಿಡಿಯುವಂಥ ಧಾರ್ಮಿಕ ಪರಂಪರೆಯೇ ಜೀವನದ ಗುರಿಯಾಗಿತ್ತು. ಪರಂಪರಾನುಗತವಾಗಿ ರೂಢಿಯಲ್ಲಿದ್ದ ಪತಿಭಕ್ತಿ ಕಾಯಕ, ದಾಸೋಹ, ಆಧ್ಯಾತ್ಮೋನ್ನತಿ ಮೌಲ್ಯಗಳಿಗೆ ತಲೆಬಾಗುವುದು ಹಿತವಾಗಿ ಕಂಡಿತ್ತು. ಶಿವಶರಣರಲ್ಲಿ ಕೆಲವರು ಸ್ತ್ರೀ ಧರ್ಮಕ್ಕಿಂತಲೂ ದೂರ ಸರಿದು ಹೊಸದೇ ಆದ ಜೀವನ ಧರ್ಮವನ್ನು ಅನಾವರಣಗೊಳಿಸುವ ರೀತಿ ಅದ್ಭುತವೆನಿಸುತ್ತದೆ. ಪತಿಗೆ ಬುದ್ಧಿ ಹೇಳುವಷ್ಟು ಪ್ರಬುದ್ಧಳಾದ ಲಕ್ಕಮ್ಮ, ಅದ್ಭುತ ಶಿಕ್ಷಕ ಮನೋಭಾವವನ್ನು ತೋರುವ ಲಿಂಗಮ್ಮ, ಹೆಣ್ಣು-ಗಂಡಿನ ಭೇದವನ್ನು ಸಾರಾಸಗಟವಾಗಿ ಖಂಡಿಸುವ ಗೊಗ್ಗವ್ವೆ ಇವರೆಲ್ಲಾ ಅಂದಿನ ಸಮಾಜ, ಸಂಸಾರವನ್ನು ಕುರಿತಂತೆ ಸ್ಥಾಪಿಸಿದ ಮೌಲ್ಯಗಳಿಗೆ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನ ನೀಡಿರುವರು. ಒಟ್ಟಿನಲ್ಲಿ ಈ ವಚನಕಾರ್ತಿಯರ ದೃಷ್ಟಿಯ ಹರವು ಎಲ್ಲಾ ಕ್ಷೇತ್ರಗಳನ್ನು ವ್ಯಾಪಿಸಿತು. ಕೇವಲ ಕುಟುಂಬ ಅಷ್ಟೇ ಅಲ್ಲ ಇಡೀ ಸಮಾಜದ, ಧರ್ಮದ ಎಲ್ಲಂದದದ ಅನುಭವಗಳು ವಚನಕಾರ್ತಿಯರ ವಚನಗಳಲ್ಲಿ ಅಭಿವ್ಯಕ್ತಿಗೊಂಡಿವೆ.

ಶರಣರು ಪ್ರವಾಹದ ವಿರುದ್ಧ ಈಸಿ ಜಯ ಗಳಿಸಿದರು. ಏಕೆಂದರೆ ಧರ್ಮ ತತ್ವಶಾಸ್ತ್ರಗಳೆಲ್ಲ ಹೇಳುತ್ತ ಬಂದುದನ್ನು ಇವರು ಸ್ವೀಕರಿಸಲಿಲ್ಲ. ಭಿನ್ನವಾದ ಆಲೋಚನಾ ಕ್ರಮವನ್ನು ಬೆಳೆಸಿಕೊಂಡು ಜನಪರವಾದ ತತ್ವಗಳನ್ನು ಬಿತ್ತರಿಸಿ ಸಮಾಜದ ಏಳಿಗೆಗಾಗಿ ಶ್ರಮಿಸಿದ ಇವರ ಪ್ರಯತ್ನ ಶ್ಲಾಘನೀಯ. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ಒಂದು ಘಟಕ ವ್ಯಕ್ತಿಗಳ ಏಳು-ಬೀಳಿನಲ್ಲಿ ಸಮಾಜದ ಪಾಲಿರುತ್ತದೆ. ಹಾಗೆಯೇ ಸಮಾಜದಲ್ಲಿ ವ್ಯಕ್ತಿಗಳದ್ದೂ ಕೂಡ ಸಮಾಜವೆಂದರೆ ಬೇರೆ ಬೇರೆಯಾಗಿರುವ ಮರಳಿನ ಕಣಗಳಂತಲ್ಲ, ಭಿನ್ನತೆಯಲ್ಲೂ ಅಭಿನ್ನತೆಯಲ್ಲೂ, ಅನೇಕತೆಯಲ್ಲೂ, ಏಕತೆಯನ್ನು ಹೊಂದಿ ರೀತಿ-ನೀತಿ ನುಡಿನಡಾವಳಿಯಲ್ಲಿ ಸಾಮಾನ್ಯವಾಗಿ ಸರಿಸಮಾನ ಸ್ಪಂದನಗಳನ್ನು ಪಡೆದಿರುವ ನೆಲದಲ್ಲಿ ಬೇರುಗಳನ್ನು ಬಿಟ್ಟಿರುವ ಜನಗಳ ಗುಂಪಿಗೆ ಸಮಾಜ ಎನ್ನಬಹುದು. ವ್ಯಕ್ತಿ ಸಮಾಜ ಒಂದಕ್ಕೊಂದು ಪೂರಕ-ಪೋಷಕ ವ್ಯಕ್ತಿಗಳನ್ನುಳಿದು ಸಮಾಜವಿರಲಾರದು, ಸಮಾಜವನ್ನುಳಿದು ವ್ಯಕ್ತಿಗಳಿರಲಾರರು, ಇದ್ದರು ಸಮಾಜದ ಹೊರತಾಗಿ ಸಂಪೂರ್ಣ ವ್ಯಕ್ತಿತ್ವವನ್ನು ಪಡೆಯಲಾರರು. ಒಟ್ಟಿನಲ್ಲಿ ವ್ಯಕ್ತಿ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈ ಅವಿನಾಭಾವ ಸಂಬಂಧ ಇರುವುದರಿಂದಲೇ ತೀವ್ರ ಸಂವೇದನಾಶೀಲ ವ್ಯಕ್ತಿಯ ಹೃದಯ ಏರು-ಪೇರು, ನೋವು-ನಲಿವು, ನ್ಯಾಯ-ಅನ್ಯಾಯಗಳನ್ನು ಕಂಡು ಪ್ರತಿಸ್ಪಂದಿಸುತ್ತದೆ. ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತದೆ. ಜೀವನದ ಮೌಲ್ಯ-ಅಪಮೌಲ್ಯಗಳನ್ನು ಸಮಾಜದ ಏಳು-ಬೀಳುಗಳನ್ನು ಸ್ಥಿತ್ಯಂತರಗಳನ್ನು ಅರ್ಥಮಾಡಿಕೊಳ್ಳುವುದು ಇಲ್ಲಿ ಅತ್ಯಂತ ಅವಶ್ಯಕವೆನಿಸುತ್ತದೆ.

ಕಲ್ಯಾಣಿ ಚಾಲುಕ್ಯರ ಮೂರನೇ ತೈಲಪನ ಅಶಕ್ತತೆಯಿಂದಾಗಿ ಕಲಚೂರ್ಯ ವಂಶದ ಬಿಜ್ಜಳನೇ ಅಧಿಕಾರವನ್ನು ಆಕ್ರಮಿಸಿಕೊಳ್ಳುತ್ತ ಕ್ರಮೇಣ ರಾಜನಾದದ್ದು ದಕ್ಷಿಣದಲ್ಲಿ ಹೊಯ್ಸಳರ ಪ್ರಾಬಲ್ಯ, ಉತ್ತರದಲ್ಲಿ ಯಾದವರು, ಇವರ ಮಧ್ಯ ಘರ್ಷಣೆಗಳು, ಹೀಗಾಗಿ ರಾಜಕೀಯವಾಗಿ ಜನ ಅಸ್ಥಿರ ಪರಿಸ್ಥಿತಿಯಲ್ಲಿದ್ದರು. ಅಲ್ಲದೇ ಜೈನ-ಬೌದ್ಧ, ವೈದಿಕ ಧರ್ಮಗಳ ನಡುವಿನ ಪೈಪೋಟಿ, ಮೇಲು-ಕೀಳೆಂಬ ಸ್ವಮತ ಪ್ರಚಾರದ ಸೆಣಸಾಟ. ಹೀಗೆ ರಾಜಕೀಯವಾಗಿಯೂ, ಧಾರ್ಮಿಕವಾಗಿಯೂ ಅಸ್ಥಿರತೆ ಅಂಚಿನಲ್ಲಿ ದಿಕ್ಕು ತೋಚದೇ ಕಂಗಾಲಾಗಿದ್ದ ಜನತೆಗೆ ಗೊತ್ತು ಗುರಿಯನ್ನು ತೋರಿಸುವ ಸಮರ್ಥ ಮಾರ್ಗದರ್ಶಕರಾಗಿ ಮೂಡಿ ಬಂದರು ಬಸವಣ್ಣನವರು. ವೀರಶೈವ ಧರ್ಮದ ಉದ್ಧಾರಕರೂ ತತ್ವ ಪ್ರಚಾರಕರೂ ಆದ ಅವರು ಹೊಸ ಸಮಾಜ ವ್ಯವಸ್ಥೆಯ ಕ್ರಾಂತಿಗೆ ನಾಂದಿಯನ್ನು ಹಾಡಿದರು. ಅಂದಿನ ಸಮಾಜದಲ್ಲಿ ಮನೆಮಾಡಿಕೊಂಡಿದ್ದ ಕಂದಾಚಾರ, ಡಾಂಭಿಕತೆ, ವಂಚನೆ ಮುಂತಾದವುಗಳನ್ನು ತೊಡೆದು ಹಾಕಿ ಶುಚಿಗೊಳಿಸಬೇಕೆಂದು ಮನಸ್ಸು ಮಾಡಿದರು. ಹೀಗೆ ಜನಸಮಾನ್ಯರ ಬದುಕನ್ನು ಹಸನುಗೊಳಿಸಬೇಕಾದರೆ ಮೌಢ್ಯವನ್ನು ಹೋಗಲಾಡಿಸಿ ಸರಿದಾರಿಯನ್ನು ತೋರಿಸಬೇಕಾದರೆ ಅವರಿಗೆ ಅರ್ಥವಾಗುವ ಸರಳ ಭಾಷೆಯನ್ನು ಬಳಸಬೇಕೆಂಬ ಅನಿವಾರ್ಯತೆಯನ್ನು ಅರ್ಥಮಾಡಿಕೊಂಡರು. ಇದು ಬಸವಣ್ಣನವರ ಸಾಮಾಜಿಕ ಪ್ರಜ್ಞೆಯ ಸಂಕೇತ. ಬಸವಣ್ಣನವರ ಅನುಯಾಯಿಗಳಾಗಿ ಅನೇಕ ಶಿವಶರಣರು ಕೂಡ ಸಮಾಜದ ಏಳಿಗೆಗಾಗಿ ಶ್ರಮಿಸಿರುವುದು ವಚನ ಸಾಹಿತ್ಯ ಅಧ್ಯಯನ ಮಾಡಿದವರಿಗೆ ತಿಳಿದ ವಿಷಯವೇ ಆಗಿದೆ. ಇಲ್ಲಿ ವಚನಕಾರರಂತೆ ವಚನಕಾರ್ತಿಯರು ಕೂಡ ಈ ಚಳುವಳಿಯಲ್ಲಿ ಭಾಗವಹಿಸಿದ್ದು ಅಷ್ಟೇ ಪ್ರಮುಖ ವಿಷಯವಾಗಿ ಕಂಡು ಬರುತ್ತದೆ.

ನಮ್ಮ ಸ್ತ್ರೀ ಸಮೂಹ ತಮ್ಮ ಆಲೋಚನಾ ಶಕ್ತಿ, ವಿಚಾರ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತ ಬಂದುದು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದು, ಅದಕ್ಕೆ ತಕ್ಕಂತೆ ತಮ್ಮದೇ ಆದ ಪರಿಸರವನ್ನು ನಿರ್ಮಿಸಿಕೊಂಡದ್ದು ತುಂಬಾ ಮಹತ್ವಪೂರ್ಣವಾದ ಸಂಗತಿಯಾಗಿದೆ. ಶಿವಶರಣೆಯರು ಗಣನೀಯ ಸಂಖ್ಯೆಯಲ್ಲಿ ತಮ್ಮ-ತಮ್ಮ ಪರಿಮಿತಿಯೊಳಗೆ ಸಮಾಜವನ್ನು ಕುರಿತು ಚಿಂತಿಸಿದಾರೆ, ತಮ್ಮ ಅಭಿಪ್ರಾಯಗಳನ್ನು ನಿರ್ಭಿತವಾಗಿ ವ್ಯಕ್ತಪಡಿಸಿರುವುದು ಸ್ತ್ರೀಯ ಅಭಿವ್ಯಕ್ತಿಯ ಹಾದಿಯಲ್ಲಿ ಕುತೂಹಲಕರ ಹಾಗೂ ಅತ್ಯಂತ ಮಹತ್ವದ ಸಾಧನೆ ಎನಿಸುತ್ತದೆ. ವಚನಕಾರ್ತಿಯರು ಬಹುಮಟ್ಟಿಗೆ ಅನುಭಾವ ಆತ್ಮಶುದ್ಧಿ, ಧರ್ಮ, ನೀತಿ ಡಾಂಭಿಕ ಭಕ್ತಿ ಮುಂತಾದವುಗಳನ್ನು ಕುರಿತು ಹೇಳುತ್ತಾರೆ. ಇವರು ಒಂದೊಂದು ಬಾರಿ ಸಮಾಜ ಸುಧಾರಕರಂತೆ, ಮನೋವಿಜ್ಞಾನಿಗಳಂತೆ ಕಂಡುಬರುವದು ಆಶ್ಚರ್ಯವೆನಿಸುತ್ತದೆ. ಸಂಪ್ರದಾಯ ವ್ಯವಸ್ಥೆಗಳ ವಿರುದ್ಧ ಅಸಹನೆಯನ್ನು ವ್ಯಕ್ತಪಡಿಸುತ್ತಾರೆ. ಅನುಭಾವಿಗಳಾಗಿ ಆತ್ಮದ ಗುಣವನ್ನು, ಮನದ ಚಪಲತೆಯನ್ನು ನೆನೆಯುತ್ತಾರೆ. ಆದರೆ ಇವೆಲ್ಲವುಗಳ ಹಿಂದೆ ಅವರ ಮಾನವತಾ ಮನಸ್ಸು ಸಮಾಜದ ಬಗ್ಗೆ ಮಿಡಿಯುತ್ತದೆ. ಅವರು ನಡೆದ ದಾರಿ ಆಧ್ಯಾತ್ಮದ ರಾಜಮಾರ್ಗವಾದರೂ ಲೌಕಿಕವನ್ನು ತಬ್ಬಿಕೊಂಡ ಇವರ ಒಲವು-ನಿಲುವುಗಳು ಮಾನವೀಯ ಸಂಬಂಧವನ್ನು ಗಟ್ಟಿಗೊಳಿಸುವಲ್ಲಿ ಮಹತ್ವಪೂರ್ಣವೆನಿಸುತ್ತವೆ.

ವಚನಕಾರ್ತಿಯರು ಪುರುಷರಂತೆ ಸಮಾಜ ಧರ್ಮ ಕಾಯಕಗಳ ಬಗ್ಗೆ ವಿಚಾರ ನಡೆಸಿದ್ದಾರೆ. ವಿಮರ್ಶಿಸಿದ್ದಾರೆ. ವಿರಕ್ತರನ್ನು ಕುರಿತಾದ ಕಟುಟೀಕೆ ಇಡೀ ವಚನ ವಾಙ್ಮಯದಲ್ಲಿ ಇನ್ನೊಂದಿಲ್ಲ. ಧರ್ಮದ ಸೋಗಿನಲ್ಲಿ ತಮ್ಮ ಹೊಟ್ಟೆ ಹೊರೆದುಕೊಳ್ಳುವ ವೇಷಧಾರಿಗಳನ್ನು ಟೀಕಿಸುವ ವಚನಗಳೆ ಇಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಶಿವಶರಣನಾದವನು ಹೇಗಿರಬೇಕು, ಗುರು-ಲಿಂಗ ಜಂಗಮನನ್ನು ಹೇಗೆ ಪರಿ ಪಾಲಿಸಬೇಕು? ಎಂದು ಹೇಳುತ್ತಲೇ ಸ್ವಾರ್ಥಿಯಾದ ಮಾನವನನ್ನು ಹರಿತವಾದ ಮಾತುಗಳ ಮೂಲಕ ಎಚ್ಚರಿಸುವ ಕೆಲಸವನ್ನು ಈ ವಚನಗಳು ಮಾಡುತ್ತ ಹೋಗುತ್ತವೆ. ಕೆಲವು ವಚನಕಾರ್ತಿಯರ ವಚನಗಳು ನೇರವಾಗಿ ಸರಳವಾಗಿ ಶಿವಶರಣರ ನೀತಿ ನಿಯಮ, ಆಚರಣೆಗಳ ಬಗ್ಗೆ ಹೊಗಳುತ್ತ ಅನುಭವ ಲೋಕದ ಪರಿಚಯ ಮಾಡಿಕೊಡುತ್ತವೆ.

ಈ ರೀತಿಯಾಗಿ ಕೇತಲದೇವಿ, ಗುಡ್ಡವೆ, ಕಾಳವ್ವೆ, ಸತ್ಯಕ್ಕ, ಆಯ್ದಕ್ಕಿ

ಲಕ್ಕಮ್ಮ, ಕಾಲಕಣ್ಣಿಯ ರಾಯಮ್ಮ, ರೆಮ್ಮವ್ವೆ ಮುಂತಾದ ವಚನಕಾರ್ತಿಯರು ಇಡೀ ಸಮಾಜವನ್ನು ಬದಲಾಯಿಸುವ ಆಂದೋಲನದಲ್ಲಿ ಮುಂಚೂಣಿಯಲ್ಲಿದ್ದರು. ನಾನಾ ವರ್ಗಗಳಿಂದ ಬಂದವರಾಗಿದ್ದರಿಂದ ಶತಮಾನಗಳಿಂದ ಬಂದ ನೋವನ್ನು ತಮ್ಮ ಮಾತಿನ ಮೂಲಕ ಹರಿಯ ಬಿಟ್ಟಿದ್ದಾರೆ. ಜಾತಿ, ವರ್ಗ, ಧರ್ಮ ಮುಂತಾದವುಗಳ ಬಗೆಗೆ ಸಿಡಿದೆದ್ದಿದ್ದಾರೆ. ಧರ್ಮದಿಂದ ದೂರವಿದ್ದು ಶೂದ್ರಳೆನಿಸಿಕೊಂಡ ಹೆಣ್ಣು ಈ ವಚನ ಯುಗದಲ್ಲಿ ಆಳವಾಗಿ ಆಧ್ಯಾತ್ಮ ಚಿಂತನೆ ಮಾಡಿದ್ದಾಳೆ. ಮೋಕ್ಷ ಸಾಧಿಸಿದ್ದಾಳೆ. ಇವರು ಮಹಿಳಾ ಶೋಷಣೆಯ ವಿರುದ್ಧ ದನಿ ಎತ್ತಿದರೂ ಪುರುಷ ದ್ವೇಷಿಗಳಾಗಿರಲಿಲ್ಲ. ಪುರುಷರನ್ನು ತಿರಸ್ಕರಿಸಿದಾಗ ಮಾತ್ರ ಸಮಾನತೆ ಬಂದು ಬಿಡುತ್ತದೆ ಎಂದು ಇವರು ಭಾವಿಸಿರಲಿಲ್ಲ. ಸಮಾನತೆಗೆ ಹೆಣ್ಣು-ಗಂಡು ಇಬ್ಬರ ಸಹಕಾರ, ಸಹಬಾಳ್ವೆ ಮುಖ್ಯ ಎಂಬುದನ್ನು ಇವರು ಚೆನ್ನಾಗಿ ಮನಗಂಡಿದ್ದರು. ಅಂತೆಯೇ ಇವರ ವಚನಗಳಲ್ಲಿ ತಮ್ಮ ಪತಿಯ ಬಗ್ಗೆ ಗೌರವ ಆದರಗಳನ್ನು ಹೊಂದಿದ್ದು ಅವರ ನೆರಳಿನಂತೆ ನಡೆದದ್ದು ಸ್ಪಷ್ಟವಾಗುತ್ತದೆ. ಹಾಗೆಯೇ ಇವರ ವಚನಗಳಲ್ಲಿ ಸ್ತ್ರೀಪರ ಕಾಳಜಿ ಇದೇ ಹೊರತು ಬೇರೆಯವರನ್ನು ದೂಷಿಸಬೇಕೆಂಬ ದುರುದ್ದೇಶ ಖಂಡಿತ ನಮಗೆ ಕಾಣಸಿಗದು. ಶರಣಸತಿ ಲಿಂಗಪತಿ ಎಂಬುದರಲ್ಲಿ ನಂಬಿಕೆಯನ್ನು ಸಾಮರಸ್ಯದ ಬಗೆಯನ್ನು ಅರಿತವರಾಗಿದ್ದರು. ಈ ವಚನಕಾರ್ತಿಯರ ನೋವು ಕಾಳಜಿಗಳು ಕೇವಲ ಅವರ ವೈಯಕ್ತಿಕ ನೆಲೆಯಲ್ಲಿ ಮಾತ್ರವಿರದೇ ವೈಯಕ್ತಿಕತೆಯಿಂದ ಸಾರ್ವತ್ರಿಕ ದೃಷ್ಟಿಯಿಂದ ಸಮಷ್ಟಿಯವರೆಗೆ ಇತ್ತು. ಅದಕ್ಕಾಗಿಯೇ ಈ ವಚನಕಾರ್ತಿಯರ ಸಂವೇದನೆಗಳು ಸಾರ್ವಕಾಲಿಕವಾಗಿವೆ.

ಸಾಮಾಜಿಕ ಸಂದರ್ಭದ ಇನ್ನೊಂದು ದೊಡ್ಡ ಪಿಡುಗೆಂದರೆ ಜಾತಿ ವ್ಯವಸ್ಥೆ. ಇದನ್ನು ಒಡೆಯಲು ಅನೇಕ ಪ್ರಯತ್ನಗಳು ನಡೆದರೂ ಯಾವುದು ಯಶಸ್ವಿಯಾಗದಿರುವದ್ದನ್ನುನೋಡಿದ್ದರೆ, ಅದು ಎಷ್ಟು ಆಳವಾಗಿ ಬೇರೂರಿದೆ ಎಂಬುದನ್ನು ಸೂಚಿಸುತ್ತದೆ. ವಚನಕಾರರು ಈ ವೈಷಮ್ಯವನ್ನು ತೊಡೆದು ಹಾಕಲು ಕಂಕಣ ಬದ್ಧರಾಗಿ ನಿಂತರು. ಈ ಸಮಯದಲ್ಲಿ ಜಾತಿ ವ್ಯವಸ್ಥೆ ಅತ್ಯಂತ ಕಠಿಣವಾಗಿತ್ತು. ಹುಟ್ಟಿನ ಆಧಾರದ ಮೇಲೆ ಮನುಷ್ಯನೊಬ್ಬ ಮೇಲು-ಕೀಳು ಆಗುವುದಕ್ಕೆ ಜಾತಿ ವ್ಯವಸ್ಥೆಯೇ ಕಾರಣವಾಗಿತ್ತು. ಈ ವ್ಯವಸ್ಥೆಯ ಪೂರ್ಣ ಲಾಭವನ್ನು ಪಡೆದವರು ವೈದಿಕರು, ಎಲ್ಲರಿಗಿಂತ ತಾವು ಮಾತ್ರ ಶ್ರೇಷ್ಠರೆಂಬುದನ್ನು ಪ್ರತಿಪಾದಿಸುತ್ತಾ ತಮಗೆ ಬೇಕಾದವರನ್ನು ಸಾಮಾಜಿಕವಾಗಿ ಮೇಲ್ಮಟ್ಟಕ್ಕೇರಿಸುವ ಬೇಡವಾದವರನ್ನು ಪ್ರಪಾತಕ್ಕೆ ತಳ್ಳುವ ಪ್ರಶ್ನಾತೀತ ಅಧಿಕಾರವನ್ನು ಈ ವೈದಿಕರು ಹೊಂದಿದ್ದರು. ಇಂಥ ಒಂದು ವ್ಯವಸ್ಥೆಯ ದಳ್ಳುರಿಗೆ ಸಿಕ್ಕು ನಲುಗಿ ಹೋದ ಕೆಳವರ್ಗದ ಜನ ಅದರ ವಿರುದ್ಧ ಕಿಡಿ ಕಾರಿದರು. ಸಾಮಾಜಿಕ ಅಸಮಾನತೆಗೆ ಅಡ್ಡಿಯಾಗುತ್ತಿದದ್ದು ಬ್ರಾಹ್ಮಣತ್ವವೆ ಹೊರತು ಆಡಳಿತಾತ್ಮಕ ವ್ಯವಸ್ಥೆ ಅಲ್ಲವೆಂಬುದನ್ನು ಕೆಳವರ್ಗದ ವಚನಕಾರರು ಚೆನ್ನಾಗಿ ಅರಿತಿದ್ದರು. ಶ್ರೇಷ್ಠತ್ವದ ನಿರ್ನಾಮವಾಗದೇ ಕನಿಷ್ಠತೆ ಅಳಿಸಿ ಹೋಗಲಾರದೆಂಬುದನ್ನು ಕಂಡುಕೊಂಡ ಇವರು ಬ್ರಾಹ್ಮಣ್ಯದ ಬೇರುಗಳನ್ನು ಕಿತ್ತಿ ಜಾಲಾಡ ತೊಡಗಿದರು. ವಚನ ಚಳುವಳಿಯಲ್ಲಿ ಕೇವಲ ವಚನಕಾರರೇ ಭಾಗವಹಿಸಲಿಲ್ಲ. ಅವರ ಸರಿಸಮಾನವಾಗಿ ಹಲವಾರು ಜನ ಕೆಳವರ್ಗದ ವಚನಕಾರ್ತಿಯರು ಕೂಡ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದನ್ನು ಈಗಾಗಲೇ ತಿಳಿದುಕೊಂಡಿದ್ದೇವೆ. ಅಕ್ಕಮಹಾದೇವಿ, ಮುಕ್ತಾಯಕ್ಕ, ಗಂಗಾಂಬಿಕೆ, ಅಕ್ಕನಾಗಮ್ಮರಂತಹ ನಾಲ್ಕಾರು ಜನರನ್ನು ಬಿಟ್ಟರೆ ಉಳಿದೆಲ್ಲಾ ವಚನಕಾರ್ತಿಯರು ತೀರಾ ಕೆಳವರ್ಗದಿಂದಲೇ ಬಂದವರಾಗಿದ್ದಾರೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಮೇಲ್ವರ್ಗದ ವಚನಕಾರರಿಗಿಂತ ವಿಭಿನ್ನ ನೆಲೆ ಚಿಂತನೆ ಮತ್ತು ಸಾಧನೆಗಳನ್ನು ಹೊಂದಿದ್ದ ಕೆಳವರ್ಗದ ವಚನಕಾರ್ತಿಯರು ಇಡೀ ಚಳುವಳಿಗೆ ಪ್ರೇರಕ ಶಕ್ತಿಯಾಗಿದ್ದರೆಂಬುದಕ್ಕೆ ಬಹುಪಾಲು ಜನ ಅದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದೆ ಸಾಕ್ಷಿಯಾಗಿದೆ.

ಕೆಳಪಾತಳಿಯಿಂದಲೇ ಭುಗಿಲೆದ್ದ ವಚಕಾರರ ಆಂದೋಲನ ಮೇಲ್ವರ್ಗ ಎಂಬ ತಾರತಮ್ಯ ಭಾವಕ್ಕೆ ಎಡೆಗೊಡದೆ ಇಡಿಯಾಗಿ ಒಂದು ನೆಲೆಯಿಂದ ಮೇಲೆದ್ದು ಸಿಡಿಯಿತೆಂಬುದು ನಿಜ.

ಮೇಲ್ವರ್ಗದವರೆಲ್ಲಾ ಜಡವಾದಿಗಳು, ಕೆಳವರ್ಗದವರೆಲ್ಲಾ ಕ್ರಾಂತಿಕಾರಿಗಳೆಂದು ಇದರರ್ಥವಲ್ಲ, ಯಾವತ್ತೂ ಮೇಲ್ವರ್ಗದವರು ಯಜಮಾನ ಸ್ಥಾನದಲ್ಲಿದ್ದು ಕೆಳವರ್ಗದ ಮೇಲೆ ತನ್ನ ಹಿಡಿತವನ್ನು ಬಿಗಿಗೊಳಿಸುತ್ತಲೇ ಸಾಗುತ್ತಿದ್ದರು. ಕೆಳವರ್ಗದ ಜನ ಅವರ ಪ್ರಭಾವಕ್ಕೆ ಒಳಗಾಗಿ ಅವರ ಸೆರೆಯಿಂದ ತಮ್ಮನ್ನು ಬಿಡಿಸಿಕೊಳ್ಳುವ ಮತ್ತು ಉಳಿಸಿಕೊಳ್ಳುವ ಹವಣಿಕೆಯಲ್ಲಿದ್ದರು.

ಮೇಲ್ವರ್ಗದವರನ್ನು ನೇರವಾಗಿ ವಿರೋಧಿಸಲಾಗದ ಸ್ಥಿತಿಯಲ್ಲಿದ್ದರೂ ಅವರ ಬಗ್ಗೆ ಸದಾ ಅಸಹನೆಯ ಧ್ವನಿ ಮಾತ್ರ ಕೇಳಿ ಬರುತ್ತಲೆ ಇತ್ತು. ಇದಕ್ಕೆ ಬೆನ್ನುಲುಬಾಗಿ ನಿಂತು ಕೆಳವರ್ಗಕ್ಕೆ ಆತ್ಮಸ್ಥೈರ್ಯ ತಂದುಕೊಟ್ಟು ನ್ಯಾಯದ ದನಿ ಎತ್ತಲು ಬಲ ನೀಡಿದವರು ಮಹಾ ಮಾನವತವಾದಿ ಬಸವಣ್ಣನವರು. ಹೀಗಾಗಿ ಅನೇಕ ಜನ ದಲಿತರ ಧ್ವನಿ ಸ್ಪಷ್ಟವಾಗಿ ಕೇಳಿ ಬರಲು ಸಾಧ್ಯವಾಯಿತು.

ಕೆಳವರ್ಗದ ವಚನಕಾರರಷ್ಟು ಪ್ರಧಾನವಾಗಿ ವಚನಕಾರ್ತಿಯರು ಜಾತಿ ವ್ಯವಸ್ಥೆಯನ್ನು ಖಂಡಿಸಿದ್ದರೂ ಅಲ್ಲಲ್ಲಿ ಸಿಗುವ ಬಿಡಿ ವಚನಗಳಲ್ಲಿ ಕದಿರೆಯ ರೆಮ್ಮವ್ವೆ ತಾನು ನೂಲುವ ರಾಟೆಯಲ್ಲಿ ಕುಲಜಾತಿಯನ್ನು ಹುಡುಕುವವರಿಗೆ ಉತ್ತರವನ್ನು ಕೊಡುತ್ತಾಳೆ.

> "ನಾ ತಿರುಹುವ ರಾಟೆಯ ಕುಲಜಾತಿ ಕೇಳಿರಣ್ಣಾ
> ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು
> ನಿಂದ ಬೊಂಬೆ ಮಹಾರುದ್ರ,
> ರುದ್ರನ ಬೆಂಬಳಿಯವರೆಡು ಸೂತ್ರಕರ್ಣ
> ಅರಿವೆಂಬ ಕದಿರು ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ
> ಸುತ್ತಿತ್ತು ನೂಲು ಕದಿರು ತಿಂಬಿತ್ತು"

ಎಂದು ತಾನು ಕೈಗೊಳ್ಳುವ ಕಾಯಕದಲ್ಲಿಯೇ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಕಾಣುತ್ತಾಳೆ. ಉರಿಲಿಂಗಪೆದ್ದಿಗಳ ಸತಿ ಕಾಳವ್ವೆ ಜಾತಿ ಜಾತಿ ಎಂದು ತಾರತಮ್ಯ ಭಾವದಿಂದ ನೋಡುವ ವರ್ಗಕ್ಕೆ ಕಠಿಣವಾದ ಮಾತುಗಳ ಮೂಲಕ ಉತ್ತರಿಸುತ್ತಾಳೆ.

> "ಕುರಿಕೋಳಿ, ಕಿರುಮೀನು ತಿಂಬುವವರೆಲ್ಲಾ ಕುಲಜರೆಂಬುವರು
> ಶಿವಗೆ ಪಂಚಾಮೃತವ ಕರೆವ ಹಸುವ ತಿಂಬ ಮಾದಿಗ ಕೀಳುಜಾತಿಯೆಂಬರು
> ಅವರೆಂತು ಕೀಳು ಜಾತಿಯಾದರು, ಜಾತಿಗಳು ನೀವೇಕೆ ಕೀಳಾಗಿರೋ"

ಗೋಮಾಂಸವನ್ನು ತಿನ್ನುವ ದಲಿತರು ಕೀಳು ಜಾತಿಯೆಂದು ಕರೆದು ಮುಖಭಂಗ ಮಾಡುವ ಜನರಿಗೆ ಕಟು ಮಾತನಾಡುತ್ತಾ, ಕುರಿ, ಕೋಳಿ, ಮೀನು ಮುಂತಾದ ಪ್ರಾಣಿಗಳನ್ನು ತಿನ್ನುವ ವರ್ಗದವರು ಹೇಗೆ ಕುಲಜರಾಗುತ್ತಾರೆ. ಶಿವಗೆ ಪಂಚಾಮೃತವ ಕರೆವ ಹಸುವನ್ನು ತಿನ್ನುವ ಮಾದಿಗನೇಕೆ ಕುಲಜನಾಗುವುದಿಲ್ಲ ಎಂದು ಪ್ರಶ್ನಿಸುತ್ತಾ ಸಿದ್ಧಲಿಕೆ, ತುಪ್ಪವನು, ಸಗ್ಗಳೆಯ ನೀರನ್ನು ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರರಿಗೆ ನರಕ ತಪ್ಪದು ಎಂದು ಎಚ್ಚರಿಸುತ್ತಾಳೆ. ಇಷ್ಟು ನೇರವಾದ ಕಟುವಾದ ಪ್ರತಿಭಟನೆ ನಿಜವಾಗಿಯೂ ಎಂಥವರೂ ಮೆಚ್ಚುವಂತಹದ್ದೆ. ಈ ರೀತಿ ಕೆಳವರ್ಗದ ವಚನಕಾರ್ತಿಯರು ಕುಲದ ಬಗ್ಗೆ ತಮ್ಮ ಕಸುಬುಗಳ ಬಗ್ಗೆ ತಮ್ಮ ಬದುಕಿನ ಪದರುಗಳ

ಬಗ್ಗೆ ಅಭಿಮಾನವನ್ನು ವ್ಯಕ್ತಪಡಿಸುತ್ತಾರೆ. ಅಂದರೆ ತಮ್ಮನ್ನು ಹಿಡಿತದಲ್ಲಿಟ್ಟುಕೊಂಡ ವರ್ಗಕ್ಕೆ ಪ್ರತಿಭಟನೆಯಾಗಿ ಗ್ರಾಮೀಣ ಬದುಕನ್ನು ಸಂವಾದಿಯಾಗಿ, ಪ್ರತಿಸಂಸ್ಕೃತಿಯನ್ನು ನಿರ್ಮಿಸುವ ಸಾಮಾಜಿಕ ಜವಾಬ್ದಾರಿಯನ್ನು ಈ ವರ್ಗ ಉತ್ಸಾಹದಿಂದ ವ್ಯಕ್ತಪಡಿಸುತ್ತದೆ.

ಈ ರೀತಿ ತಮ್ಮದೇ ಆದ ಭಾಷೆ ರೂಪಕಗಳ ಮೂಲಕ ಮಾತನಾಡುವ ಕೆಳವರ್ಗದ ವಚನಕಾರ್ತಿಯರು ಮಾಡುವ ವಿಚಾರಗಳು, ತಳೆಯುವ ನಿಲುವುಗಳು ಮುಂದೆ ನಿರ್ಮಾಣವಾಗಬೇಕಾಗಿರುವ ಮುಕ್ತ ಸಮಾಜದ ಚಿತ್ರಣ ಕೊಡುತ್ತದೆ. ಈ ಆವೇಶದ ಭರದಲ್ಲಿ ಕೆಲವೊಮ್ಮೆ ಅವರ ವಚನಗಳ ಭಾಷೆ ಸೌಮ್ಯ ರೂಪವನ್ನು ತಾಳದೆ ಕಠಿಣವಾದ ಅಭಿವ್ಯಕ್ತಿಯಾಗಿ ಕಂಡುಬರುತ್ತದೆ.

ತಮ್ಮದೇ ಆದ ಪರಿಮಿತಿಯೊಳಗೆ ವಚನಕಾರ್ತಿಯರು ವಚನಗಳನ್ನು ರಚಿಸಿದರೂ ಅವುಗಳಲ್ಲಿಯ ಹಸಿ ಹಸಿ ಸಂವೇದನೆಗಳು ಓದುಗರ ಮನಮುಟ್ಟುತ್ತವೆ. ಅನುಭಾವದಲ್ಲಿ, ಕುಟುಂಬ ಜೀವನದಲ್ಲಿ, ಕಾಯಕ ಜೀವನದಲ್ಲಿ ಸಾಮಾಜಿಕ ಜೀವನದಲ್ಲಿ ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಬದುಕು ಭಾವಗಳು ಮೇಲು–ಕೀಳು ಕಲ್ಪನೆಯನ್ನೆ ಮರೆಯಿಸುತ್ತವೆ.

ಹನ್ನೆರಡನೆಯ ಶತಮಾನದಲ್ಲಿ ಅಕ್ಷರ ಜಗತ್ತಿನ ಅರಿವಿಲ್ಲದೆ ಸತತ ಓದುವಿಕೆಯ ದರ್ಶನವಿಲ್ಲದೆ ತೀರಾ ಕೆಳವರ್ಗದಿಂದ ಬಂದು ತಮಗೆ ನೀಡಿದ ಭಾವನೆಗಳನ್ನು ಜನಪರವಾದ ರೀತಿಯಲ್ಲಿ, ವಚನಗಳನ್ನು ರಚಿಸುವ ಶರಣರ ಅಪೂರ್ವ ಸಾಧನೆ ಎಂಥವರನ್ನೂ ವಿಸ್ಮಯಗೊಳಿಸುತ್ತದೆ. ಅತ್ಯದ್ಭುತವೆನಿಸುತ್ತದೆ.

## ಪರಾಮರ್ಶನ ಗ್ರಂಥಗಳು


| ಪುಸ್ತಕದ ಹೆಸರು | ಲೇಖಕರ ಹೆಸರು | ಪ್ರಾಕಾಶನಗೊಂಡ ವರ್ಷ |
|---|---|---|
| 1. ವಚನ ಸಾಹಿತ್ಯ | ಎಂ ಚಿದಾನಂದ ಮೂರ್ತಿ | 19755 |
| 2. ವಚನ ವ್ಯಾಸಂಗ | ಡಾ. ಪಿ.ವಿ ನಾರಾಯಣ | 1972 |
| 3. ಇಂದಿನ ಶಿವಶರಣೆಯರು | ಡಾ. ಆರ್ ಸಿ. ಹಿರೇಮಠ | 1990 |
| 4. ಅರಿವು ಆಚಾರ | ಬಿ. ಮಹಾದೇವಪ್ಪ | 1998 |
| 5. ಇಪ್ಪತ್ತೇಳು ಶಿವಶರಣೆಯರ ವಚನಗಳು | ಎನ್. ಬಸವರಾಧ್ಯ | 1981 |
| 6. ಉರಿಲಿಂಗ ಪೆದ್ದಿಯ ವಚನಗಳು | ಎಚ್. ಪಿ ಮಲ್ಲೇದೇವರು | 1975 |
| 7. ಕೆಳವರ್ಗದ ವಚನಕಾರರು | ಎಲ್. ಹಣಮಂತಯ್ಯ | 1998 |
| 8. ದಲಿತ ವರ್ಗದ ಶರಣರು ಮತ್ತು ಶರಣೆಯರು | ಮ.ನ ಜವರಯ್ಯ | 1997 |
| 9. ಬಸವ ಮತ್ತು ದಲಿತೋದಯ | ವಿರೂಪಾಕ್ಷಯ್ಯ | 1994 |
| 10. ವಚನ ಸಾಹಿತ್ಯ ವೈಚಾರಿಕ ಅಧ್ಯಯನ | ಹೆಚ್ ತಿಪ್ಪೇರುದ್ರಸ್ವಾಮಿ | 1978 |
| 11. ವನವಕಾರರ ದೃಷ್ಠಿಯಲ್ಲಿ ಸ್ತ್ರೀ | ಶೈಲಜಾ ಉಡಚಣ | 1991 |